**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 622/2019**

**ಪಿ ಡಬ್ಲ್ಯೂಃ 2**

**ಸಾಕ್ಷಿಗೆ ದಿನಾಂಕಃ19.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಆರೋಪಿ ನಂ 1 ಪರ ವಕೀಲರಿಂದಃ**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೆನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನನಗೆ ದಾಖಲೆಗಳ ಬಗ್ಗೆ ಮಾಹಿತಿ ಗೊತ್ತಾಗುತ್ತದೆ. ನಾನು ಮೂಲತಃ ಬಳ್ಳಾರಿಯವನು ಎಂದರೆ ಸರಿಯಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈಗ ಬಳ್ಳಾರಿಯಲ್ಲಿ ಇದ್ದೆನೆ. 3 ವರ್ಷಗಳಿಂದ ನಾನು ವ್ಯವಹಾರ ಹೊಂದಿದ್ದೆನೆ. ನಾನು ಈಗ ಟ್ರೇಡ್ ವ್ಯವಹಾರ ಮಾಡುವುದಿಲ್ಲ, ಮೊದಲು ಮಾಡುತ್ತಿದ್ದೆ. ಪಂಚನಾಮೆ ಮಾಡಿದ ವಾರ ನೆನಪಿಲ್ಲ. ಪಂಚನಾಮೆಯನ್ನು ಪೋಲಿಸರು ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ಬರಲು ನೋಟಿಸ್ ಕಳುಹಿಸಿದ್ದರು. ಅದು ನನಗೆ ಮುಟ್ಟಿರಲಿಲ್ಲ. ನಂತರ ನನಗೆ ಪೋನ್ ಕರೆ ಮಾಡಿ ತಿಳಿಸಿದರು. ಸದರಿ ನೋಟಿಸನ್ನು ನಾನು ಪೋಲಿಸರಿಗೆ ಕೊಟ್ಟಿಲ್ಲ. ಯಾವ ದೂರವಾಣಿ ಸಂಖೆಯಿಂದ ಕರೆ ಮಾಡಿದ್ದರು ಎಂದು ನೆನಪಿಲ್ಲ. ಪಂಚನಾಮೆ ಸಮಯದಲ್ಲಿ ನಾನು ಚಾಸಾ 1, 2 ಮತ್ತು 14 ಇದ್ದೆವು. ಪಂಚನಾಮೆ ಮಾಡಿದ ದಿನ ಪೋಲಿಸರು ಯಾವುದೇ ಜಪ್ತ ಮಾಡಿಲ್ಲ ಎಂದರೆ ಸರಿ. ನಾನು ಚೆಕ್ಕುಗಳನ್ನು ನೋಡಿಲ್ಲ. ಪಂಚನಾಮೆ ದಿನ ಕೃಷ್ಣಾ ಗ್ಯಾಸ ಏಜೆನ್ಸಿಯ ದಾಖಲೆಗಳನ್ನು ನಾನು ನೋಡಿಲ್ಲ. ಚಾಸಾ 1 ರವರು ಖಾಸಗಿ ದೂರು ಸಲ್ಲಿಸಿದ ಬಗ್ಗೆ ನನಗೆ ಹೇಳಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚಕ್ಕಬಂದಿ, ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ದಾರಿ, ಉತ್ತರಕ್ಕೆ ಮಳಿಗೆ ಇದೆ. ಪಂಚನಾಮೆ ಜರುಗಿಸಿದ ಜಾಗ ಆರೋಪಿ ನಂ

1 ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಪಂಚನಾಮೆ ದಿನ ಪೋಲಿಸರು ನನ್ನ, ಚಾಸಾ 2 ರವರ ಸಹಿ ಪಡೆದರು. ಪೋಲಿಸರು ಚಾಸಾ 1 ರವರ ಸಹಿ ಪಡೆದರು. ನಿಪಿಃ 2 ಪಂಚನಾಮೆಯನ್ನು ಸ್ಥಳದಲ್ಲಿ ಬರೆದರು. ಚಾಸಾ 1 ರವರು ಕರೆದರೆ ನಾನು ಸಾಕ್ಷಿಯಾಗಿ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಅವರ ಮಾತನ್ನು ಕೇಳುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ಮಾತು ಕೇಳಿ ಆರೋಪಿಗೆ ತೊಂದರೆ ಕೊಡಲು ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸಹಿ ಮಾಡು ಅಂದಿದ್ದಕ್ಕೆ ಮಾತ್ರ ಸಹಿ ಮಾಡಿದ್ದೆನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ನಂ 2 ರವರ ಪರ ವಕೀಲರಿಂದ</u>**

2. ಪಂಚನಾಮೆ ಮಾಡುವ ಸಮಯದಲ್ಲಿ 2 ನೇ ಆರೋಪಿ ಅಲ್ಲಿ ಇರಲಿಲ್ಲ ಎಂದರೆ ಹೇಳಲಾಗುವುದಿಲ್ಲ. ಪಂಚನಾಮೆಗೆ 2 ನೇ ಆರೋಪಿಯ ಸಹಿ ಮಾಡಿದ ಬಗ್ಗೆ ಹೇಳಲಾಗುವುದಿಲ್ಲ. ನಾನು 2 ನೇ ಆರೋಪಿಯನ್ನು ನೋಡಿಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**